**ಕರ್ನಾಟಕ ವಿಧಾನ ಪರಿಷತ್ತು**

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 103 (1140) |
| ಸದಸ್ಯರ ಹೆಸರು | : | ಶ್ರೀ ಕುಶಾಲಪ್ಪ ಎಂ.ಪಿ. (ಸುಜಾ) |
| ಉತ್ತರಿಸಬೇಕಾದ ದಿನಾಂಕ | : | 16.12.2025 |
| ಉತ್ತರಿಸಬೇಕಾದ ಸಚಿವರು | : | ಪೌರಾಡಳಿತ ಮತ್ತು ಹಜ್ ಸಚಿವರು |

| | ಪ್ರಶ್ನೆ | ಉತ್ತರ |
|---|---|---|
| ಅ) | ನಗರ ಸ್ಥಳೀಯ ಸಂಸ್ಥೆ ವ್ಯಾಪ್ತಿಯಲ್ಲಿ ಇ-ತಂತ್ರಾಂಶದ ಮೂಲಕ ನಮೂನೆ-3 (ಆಸ್ತಿ) ತಿದ್ದುಪಡಿಗೆ ಅವಕಾಶ ಕಲ್ಪಿಸಲಾಗಿದೆಯೇ; ಇದಕ್ಕಿರುವ ನಿಯಮ ಮತ್ತು ಮಾನದಂಡಗಳೇನು; (ಸಂಪೂರ್ಣ ವಿವರ ನೀಡುವುದು) | ಹೌದು.<br><br>ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಇ-ಆಸ್ತಿ ತಂತ್ರಾಂಶ ಬಳಕೆ ಮಾಡಿ ನೀಡಲಾಗುವ ಇ-ಖಾತಾದಲ್ಲಿ (ನಮೂನೆ-3 / 3ಎ) ತಿದ್ದುಪಡಿ ಮಾಡಲು ಸಾರ್ವಜನಿಕ ಮತ್ತು ಆಡಳಿತಾತ್ಮಕ ಹಾಗೂ ತಾಂತ್ರಿಕ ಹಿತದೃಷ್ಟಿಯಿಂದ ಸದರಿ ನಗರ ಸ್ಥಳೀಯ ಸಂಸ್ಥೆಗಳಲ್ಲಿ ನೀಡಲಾದ ಒಟ್ಟು ಇ-ಖಾತಾಗಳಲ್ಲಿನ (ನಮೂನೆ-3 / 3ಎ) ಶೇಕಡಾ 10ರಷ್ಟನ್ನು ತಿದ್ದುಪಡಿ ಮಾಡಲು ಆಯಾ ನಗರ ಸ್ಥಳೀಯ ಸಂಸ್ಥೆಗಳ ಹಂತದಲ್ಲಿಯೇ ಕ್ರಮ ಕೈಗೊಳ್ಳಲು ಪೌರಾಡಳಿತ ನಿರ್ದೇಶನಾಲಯದ ಪತ್ರ ಸಂಖ್ಯೆ: 29771 DMA 130 KMDS 2019-20 ರಂತೆ ಇ-ಆಸ್ತಿ ತಂತ್ರಾಂಶದಲ್ಲಿ ಅವಕಾಶ ಕಲ್ಪಿಸಲಾಗಿರುತ್ತದೆ. ಸದರಿ ಪತ್ರದ ಪ್ರತಿಯನ್ನು **ಅನುಬಂಧ**ದಲ್ಲಿ ನೀಡಲಾಗಿದೆ. |
| ಆ) | ನಮೂನೆ-3 ತಿದ್ದುಪಡಿಗೆ ಶೇ.100ರಷ್ಟು ಮಿತಿ ನಿಗಧಿಪಡಿಸಿರುವುದರಿಂದ ಅನೇಕ ಅರ್ಹ ಪ್ರಕರಣಗಳಲ್ಲಿ ತಿದ್ದುಪಡಿಗೆ ಅವಕಾಶವಿಲ್ಲದೇ ಸಾರ್ವಜನಿಕರಿಗೆ ತೊಂದರೆ ಉಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ನಗರ ಸ್ಥಳೀಯ ಸಂಸ್ಥೆಗಳಲ್ಲಿ ಇ-ಆಸ್ತಿ ತಂತ್ರಾಂಶದ ಮೂಲಕ ಇ-ಖಾತಾ (ನಮೂನೆ-3 / 3ಎ) ನೀಡುವ ಸಂದರ್ಭದಲ್ಲಿ ಮೊದಲಿಗೆ ಕರಡು ಪ್ರತಿಯನ್ನು ಸೃಜಿಸಿ, ಸಂಬಂಧಪಟ್ಟ ನಾಗರೀಕರಿಗೆ ನೀಡಿ, ಒಂದು ವೇಳೆ ತಿದ್ದುಪಡಿಗಳಿದ್ದಲ್ಲಿ ಅದನ್ನು ಪರಿಶೀಲಿಸಿ, ನೀಡಲು ಕೋರಲಾಗುತ್ತದೆ. ನಾಗರೀಕರು ಕರಡು ಪ್ರತಿಯನ್ನು ಪರಿಶೀಲಿಸಿ ನೀಡಿದ ನಂತರದಲ್ಲಿ ಅಂತಿಮ ಇ-ಖಾತಾ (ನಮೂನೆ-3 / 3ಎ) ಸೃಜಿಸಿ, ನೀಡಲಾಗುತ್ತಿದೆ. |
| ಇ) | ಅರ್ಹ ಪ್ರಕರಣಗಳಲ್ಲಿ ಸಾರ್ವಜನಿಕರಿಗೆ ನೆರವಾಗುವಂತೆ ತಿದ್ದುಪಡಿ ಮಿತಿಯನ್ನು 10 ರಿಂದ ಶೇಕಡ 30ರಷ್ಟು ಹೆಚ್ಚಿಸಲು ಸರ್ಕಾರದ ನಿಲುವೇನು? | ಅಂತಿಮ ಇ-ಖಾತಾ (ನಮೂನೆ-3 / 3ಎ) ಸೃಜಿಸಿ, ನೀಡಲಾದ ನಂತರದಲ್ಲಿಯೂ ಸಹ ತಿದ್ದುಪಡಿಗಾಗಿ ಅರ್ಜಿ ಸಲ್ಲಿಸಿದ ಸಂದರ್ಭಗಳಲ್ಲಿ, ಸದರಿ ನಗರ ಸ್ಥಳೀಯ ಸಂಸ್ಥೆಗಳಿಂದ ನೀಡಲಾದ ಒಟ್ಟು ಇ-ಖಾತಾಗಳಲ್ಲಿನ (ನಮೂನೆ-3 / 3ಎ) ಶೇಕಡಾ 10ರಷ್ಟನ್ನು ತಿದ್ದುಪಡಿ ಮಾಡಲು ಆಯಾ ನಗರ ಸ್ಥಳೀಯ ಸಂಸ್ಥೆಗಳ ಹಂತದಲ್ಲಿಯೇ ಕ್ರಮ ಕೈಗೊಳ್ಳಲಾಗುತ್ತಿದೆ.<br><br>ಆದಾಗ್ಯೂ, ನಗರ ಸ್ಥಳೀಯ ಸಂಸ್ಥೆಗಳಿಂದ ಶೇಕಡಾ 10ರಷ್ಟು ಮಿತಿಯನ್ನು ಮೀರಿ ತಿದ್ದುಪಡಿ ಮಾಡಲು ಸ್ವೀಕೃತವಾಗುವ ಪ್ರಸ್ತಾವನೆಗಳನ್ನು ಪೌರಾಡಳಿತ ನಿರ್ದೇಶನಾಲಯದಲ್ಲಿ ಪರಿಶೀಲಿಸಿ, ಅರ್ಹ ಪ್ರಕರಣಗಳೆಂದು ಮನಗಂಡಲ್ಲಿ, ಶೇಕಡಾ 10ರ ಮಿತಿಯನ್ನು ಸಡಿಲಿಸಿ, ಇ-ಆಸ್ತಿ ತಂತ್ರಾಂಶದಲ್ಲಿ ತಿದ್ದುಪಡಿ ಮಾಡಲು ಪೌರಾಡಳಿತ ನಿರ್ದೇಶನಾಲಯದಿಂದ ಅನುಮತಿಯನ್ನು ನೀಡಲಾಗುತ್ತಿದೆ. |

**ಸಂಖ್ಯೆ: ನಅಇ 298 ಜಿಇಎಲ್ 2025 (ಇ)**

**(ರಹೀಂ ಖಾನ್)**
ಪೌರಾಡಳಿತ ಮತ್ತು ಹಜ್ ಸಚಿವರು

ಅನುಬಂಧ

KMDS

ಕರ್ನಾಟಕ ಮುನಿಸಿಪಲ್ ಡಾಟಾ ಸೊಸೈಟಿ(ರಿ)
ಪೌರಾಡಳಿತ ನಿರ್ದೇಶನಾಲಯ,
#1-4, 6ನೇ ಮಹಡಿ, ಐ.ಟಿ ಪಾರ್ಕ್,
ರಾಜಾಜಿನಗರ, ಇಂಡಸ್ಟ್ರಿಯಲ್ ಎಸ್ಟೇಟ್,
ಬೆಂಗಳೂರು-560 010.

Comp No.29771 DMA 130 KMDS 2019-20 | ದಿನಾಂಕ: -03-2020.

ಗೆ,

ರಾಜ್ಯ ಸೂಚನಾ ವಿಜ್ಞಾನಾಧಿಕಾರಿಗಳು
ಹಾಗೂ ಉಪ ಮಹಾನಿರ್ದೇಶಕರು,
ರಾಷ್ಟ್ರೀಯ ಸೂಚನಾ ವಿಜ್ಞಾನ ಕೇಂದ್ರ,
ಕರ್ನಾಟಕ ರಾಜ್ಯ ಘಟಕ,
ಬೆಂಗಳೂರು.

ಮಾನ್ಯರೆ,

ವಿಷಯ: ಸ್ಥಳೀಯ ಸಂಸ್ಥೆಗಳಲ್ಲಿ ಜಾರಿಯಲ್ಲಿರುವ ಇ-ಆಸ್ತಿ ತಂತ್ರಾಂಶದಲ್ಲಿ ತಿದ್ದುಪಡಿ ಮತ್ತು ಹೆಚ್ಚಿನ ತಂತ್ರಾಂಶಗಳ ಜೋಡಣೆ ಕುರಿತು.

ಉಲ್ಲೇಖ: 1) ಪೌರಾಡಳಿತ ನಿರ್ದೇಶನಾಲಯದ ಸುತ್ತೋಲೆ ಪತ್ರ ಸಂಖ್ಯೆ: 15746 DMA 2 PTIS 2016-17, ದಿನಾಂಕ:08-09-2016.
2) ಕೆಎಂಡಿಎಸ್ ರವರ ಇ-ಮೇಲ್ ದಿನಾಂಕ:03-03-2020.

................

ರಾಜ್ಯದ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಇ-ಆಸ್ತಿ ತಂತ್ರಾಂಶವನ್ನು ಅನುಷ್ಠಾನಗೊಳಿಸಲಾಗಿದ್ದು, ತಂತ್ರಾಂಶದ ಯಶಸ್ವಿ ಅನುಷ್ಠಾನಕ್ಕೆ ಈ ಕೆಳಗೆ ಕಾಣಿಸಿದ ಸೌಲಭ್ಯಗಳನ್ನು ಇ-ಆಸ್ತಿ ತಂತ್ರಾಂಶದಲ್ಲಿ ಒದಗಿಸುವುದು.

1) ಉಲ್ಲೇಖ (1)ರ ಪತ್ರದಲ್ಲಿ ಇ-ಆಸ್ತಿ ತಂತ್ರಾಂಶದಲ್ಲಿ ಶೇ.3ನ್ನು ಮೀರದಂತೆ ಆಸ್ತಿಗಳ ತಿದ್ದುಪಡಿಯನ್ನು ಮಾಡಲು ನಗರ ಸ್ಥಳೀಯ ಸಂಸ್ಥೆಗಳಿಗೆ ನಿರ್ದೇಶನ ನೀಡಲಾಗಿರುತ್ತದೆ. ಹಾಲಿ ಸಾರ್ವಜನಿಕ, ಆಡಳಿತಾತ್ಮಕ ಮತ್ತು ತಾಂತ್ರಿಕ ಹಿತದೃಷ್ಟಿಯಿಂದ ಶೇ.3 ರಿಂದ ಶೇ.10 ಕ್ಕೆ ತಿದ್ದುಪಡಿ ಮಿತಿಯನ್ನು ತತ್‌ಕ್ಷಣದಿಂದ ಜಾರಿಗೆ ಬರುವಂತೆ ಇ-ಆಸ್ತಿ ತಂತ್ರಾಂಶದಲ್ಲಿ ಅವಕಾಶಕಲ್ಪಿಸುವುದು.
2) ಇ-ಆಸ್ತಿ ತಂತ್ರಾಂಶದಲ್ಲಿ ಆಸ್ತಿಗಳ ಮಾಹಿತಿಯನ್ನು ದಾಖಲಿಸುವ ಪ್ರಕ್ರಿಯೆಯನ್ನು ಸರಳೀಕರಿಸುವ ಹಿತದೃಷ್ಟಿಯಿಂದ ಎನ್.ಐ.ಸಿ ವತಿಯಿಂದ ಅಭಿವೃದ್ಧಿಪಡಿಸಿ ಲಭ್ಯವಿರುವ ಇ-ಆಸ್ತಿ ಮೊಬೈಲ್ ತಂತ್ರಾಂಶವನ್ನು ನಗರ ಸ್ಥಳೀಯ ಸಂಸ್ಥೆಗಳಿಗೆ ನೀಡುವುದು.
3) ನಗರ ಸ್ಥಳೀಯ ಸಂಸ್ಥೆಗಳಲ್ಲಿನ ಆಸ್ತಿ ತೆರಿಗೆ ವಹಿವಾಟನ್ನು ಸರಳೀಕರಿಸುವ ಹಿತದೃಷ್ಟಿಯಿಂದ ಇ-ಆಸ್ತಿ ತಂತ್ರಾಂಶವನ್ನು ಕೆಎಂಡಿಎಸ್ ವತಿಯಿಂದ ಸಿದ್ಧಪಡಿಸಿ ಜಾರಿಯಲ್ಲಿರುವ Property Tax Calculator (PTC) ತಂತ್ರಾಂಶದೊಂದಿಗೆ ಆದ್ಯತೆ ಮೇರೆಗೆ ಜೋಡಣೆ ಮಾಡುವುದು.
4) ಕಟ್ಟಡ ಪರವಾನಿಗೆ ಮತ್ತು ಸ್ವಾಧೀನಾನುಭವ ಪ್ರಮಾಣ ಪತ್ರ (Occupancy Certificate) ನಿರ್ವಹಣೆಗೆ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಬಳಕೆಯಲ್ಲಿರುವ Land and Building Plan Approval System (LBPAS) ಇ-ಆಸ್ತಿ ತಂತ್ರಾಂಶದೊಂದಿಗೆ ಜೋಡಣೆ ಮಾಡುವುದು.

ಈ ಮೇಲಿನ (2) ಮತ್ತು (3)ರ ಸಂಖ್ಯೆ ಅಂಶಗಳ ಬಗ್ಗೆ ಕರ್ನಾಟಕ ಮುನಿಸಿಪಲ್ ಡಾಟಾ ಸೊಸೈಟಿಯೊಂದಿಗೆ ಸಮನ್ವಯ ಸಾಧಿಸಲು ಕೋರಿದೆ.

ತಮ್ಮ ವಿಶ್ವಾಸಿ,
20.20.03.20
ನಿರ್ದೇಶಕರು,
ಪೌರಾಡಳಿತ ನಿರ್ದೇಶನಾಲಯ
ಬೆಂಗಳೂರು.

**ಪ್ರತಿಯನ್ನು ಗೌರವಪೂರ್ವಕವಾಗಿ ಮಾಹಿತಿಗಾಗಿ ಸಲ್ಲಿಸಿದೆ:**
ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ, ವಿಕಾಸ ಸೌಧ, ಬೆಂಗಳೂರು.